**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 28.04.2026**

**ಮುಂದುವರೆದ ಪಾಟೀಸವಾಲುಃ 1ನೇ ಪಕ್ಷಗಾರರ ಪರ ಪ್ರತಿರಕ್ಷಕರಿಂದಃ-** .

ನಾನು ಬಸ್ಸನ್ನು ತನಿಖೆ ಮಾಡುವಾಗ ಸಂಚಾರ ನಿಯಂತ್ರಕನಾಗಿದ್ದೆನು ತನಿಖಾಧಿಕಾರಿ ಆಗಿರಲಿಲ್ಲ ಎಂದರೆ ಸರಿ. ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ತಿಳುವಳಿಕೆ ಕೊಡುವುದು ಮತ್ತು ಬಸ್ಸುಗಳು ಬಸ್ ನಿಲ್ದಾಣದಿಂದ ಹೋಗುವ ಬಗ್ಗೆ ನೋಡಿಕೊಳ್ಳುವುದು ಸಂಚಾರ ನಿಯಂತ್ರಕರ ಹುದ್ದೆ ಎಂದರೆ ನಿಜ. ಆ ದಿವಸ ನಾನು ನನ್ನ ಜೊತೆ ಇದ್ದ ಸಂಚಾರ ನಿರೀಕ್ಷಕರಿಗೆ ಸಹಾಯಕನಾಗಿ ಹೋದದ್ದು ಎಂದರೆ ಸರಿ.

2.ಸಂಚಾರ ನಿರೀಕ್ಷಕರಿಗೆ ದಿವಸಕ್ಕೆ ಇಷ್ಟೇ ಕೇಸನ್ನು ಹಿಡಿಯಬೇಕು ಎಂದು ಮೇಲಧಿಕಾರಿಗಳು ಗುರಿ ನೀಡಿರುತ್ತಾರೆ ಎಂದರೆ ಸರಿ. ಆ ಗುರಿ ತಲುಪದೇ ಇದ್ದಲ್ಲಿ ಅವರ ಮೇಲೆ ಚಾರ್ಜ್ ಶೀಟನ್ನು ಹೇರುತ್ತಾರೆಂದರೆ ಸರಿ. ಆಮೇಲೆ ಆಪಾದನೆ ಪತ್ರ ನೀಡಿ ಶಿಕ್ಷೆ ಕೂಡ ಕೊಡುತ್ತಾರೆ ಎಂದರೆ ಸರಿ.

3.ಈ ಪ್ರಕರಣದಲ್ಲಿ ಆಪಾದನಾ ಪತ್ರವನ್ನು ನಾನೇ ಬರೆದಿರುತ್ತೇನೆ. ಆ ಆಪಾದನಾ ಪತ್ರದಲ್ಲಿ ಯಾವುದೇ ಕಾರಣಕ್ಕೂ ನೌಕರರು ಅದನ್ನು ನಿರಾಕರಿಸಬಾರದೆಂದು ಸೂಚನೆ ಇದೆ ಎಂದರೆ ನಿಜ. ಅದರಲ್ಲಿ ಬರೆದಿರುವುದು ಸುಳ್ಳು ತಪ್ಪು ಎಂಬ ಕಾರಣಕ್ಕೆ ಅದನು ನಿರಾಕರಿಸುವ ಹಕ್ಕು ನೌಕರರಿಗಿಲ್ಲ ಎಂದರೆ ಸಾಕ್ಷಿಯು ಅದು ಅವರಿಗೆ ಬಿಟ್ಟದ್ದು ಎನ್ನುತ್ತಾರೆ. ಸ್ಥಳದಲ್ಲಿ ನೀಡಿದ ಮೆಮೋವನ್ನು ಸ್ವೀಕರಿಸದಿದ್ದಲ್ಲಿ refusal of memo ಎಂದು ಆಪಾದನೆ ಹೊರಿಸುತ್ತೇವೆಂದರೆ ನಿಜ.

4.ನಮ್ಮ ವರದಿಯಲ್ಲಿ ಗಂಭೀರ ಅಪರಾಧ ಪ್ರಕರಣ ಎಂದು ಕಾಣಿಸಿದ್ದೇವೆ ಎಂದರೆ ನಿಜ. ನಮಗೆ ಇಂತಿಷ್ಟೇ ಗಂಭೀರ ಪ್ರಕರಣ ಕೇಸುಗಳನ್ನು ಹಾಕಬೇಕೆಂಬ ಗುರಿ ಇರುವುದರಿಂದ ಇದನ್ನು ಗಂಭೀರ ಪ್ರಕರಣ ಎಂದು ಕಾಣಿಸಿರುವುದು ಎಂದರೆ ಸಾಕ್ಷಿಯು ಆ ರೀತಿ ಅಲ್ಲ ಅದು ಪ್ರಯಾಣಿಕರ ಟಿಕೇಟ್ ಹಣ ಅಥವಾ ಸಿಬ್ಬಂದಿಗಳ ಬಳಿ ಇರುವಂತಹ ಅನಧಿಕೃತ ಹಣ ಇಷ್ಟೆಂದು ಇದ್ದು ಅದನ್ನು ದಾಟಿದರೆ ಅದನ್ನು ಗಂಭೀರ ಪ್ರಕರಣ ಎಂದು ಕಾಣಿಸುತ್ತೇವೆ ಎನ್ನುತ್ತಾರೆ.

5.ಒಬ್ಬ ಚಾಲಕನಿಗೆ ಸಂಸ್ಥೆಯ ಬಸ್ಸನ್ನು ಓಡಿಸುವ ಕೆಲಸ ವಹಿಸಿದಾಗ ಆ ಕೆಲಸ ಬಿಟ್ಟರೆ ಬೇರೆ ಯಾವುದೇ ಕೆಲಸವನ್ನು ಅವರಿಗೆ ನೀಡುವುದಿಲ್ಲ. ಚಾಲಕರಾಗಿರುವಾಗ ಅವರು ಪ್ರಯಾಣಿಕರಿಗೆ

ಟಿಕೆಟ್ ಕೊಡುವ ಕೆಲಸವನ್ನು ಮಾಡುವುದಿಲ್ಲ. ಅವರ ಬಳಿ 5020 ರೂಪಾಯಿ ಬರಲು ಸಾಧ್ಯವೇ ಇಲ್ಲ ಎಂದರೆ ಸುಳ್ಳು. ಅನಧಿಕೃತವಾಗಿ ಹಣ ಹೇಗೆ ಬರುತ್ತದೆ ಎಂದರೆ ಸಾಕ್ಷಿಯು ಅನಧಿಕೃತವಾಗಿ ವಸ್ತುಗಳನ್ನು ಸಾಗಿಸಿದರೆ ಅಥವಾ ಬೇರೆಯವರ ವಸ್ತುಗಳನ್ನು ಸಾಗಿಸಿದರೆ ಬರುತ್ತದೆ ಎನ್ನುತ್ತಾರೆ. ಆ ರೀತಿ ಹಣ ಬರುತ್ತದೆ ಎಂದು ನಾನು ಅಂದಾಜಿನಲ್ಲಿ ಹೇಳುತ್ತಿರುವುದು ಎಂದರೆ ಸರಿ.

6.ಈಗ ನನಗೆ ತೋರಿಸಿದ ನಿಆರ್-17 ನಮ್ಮ ಬಸ್ಸಿನ ಟಿಕೇಟ್ ಎಂದರೆ ನಿಜ. ಆ ಟಿಕೇಟ್ ಪಡೆದ ವ್ಯಕ್ತಿ ಅಂದು ಬಸ್ಸಲ್ಲಿದ್ದರು ಎಂದರೆ ಸರಿಯಲ್ಲ. ಮಾದೇಶ ಎನ್ನುವ ಪ್ರಯಾಣಿಕ ಬಸ್ಸಿನಿಂದ ಇಳಿಯುವಾಗ ತನ್ನ ಪರ್ಸನ್ನು ಬಸ್ಸಿನಲ್ಲಿ ಬೀಳಿಸಿ ಹೋಗಿದ್ದ ತಕ್ಷಣವೇ ಗೊತ್ತಾಗಿ ಸದರಿ ಪ್ರಯಾಣಿಕ ವಾಪಸ್ ಬಂದಿದ್ದು ಅಷ್ಟರಲ್ಲಿ 1ನೇ ಪಕ್ಷಗಾರರು ಆ ಪರ್ಸನ್ನು ಗಮನಿಸಿ ಅದನ್ನು ತೆಗೆದು ಮಾದೇಶನಿಗೆ ಕೊಡುವಷ್ಟರಲ್ಲಿ ನಾವು ಬಂದು ಹಿಡಿದುಕೊಂಡದ್ದು ಎಂದರೆ ಸರಿಯಲ್ಲ. ಆ ರೀತಿ ನಾವು ಕಿತ್ತುಕೊಂಡದ್ದು ಎಂದು ಮಾದೇಶ ನಮ್ಮ ಇಲಾಖೆಗೆ ದೂರು ಕೊಟ್ಟಿದ್ದಎಂದರೆ ಇರಬಹುದು. ವಕೀಲರಿಂದ ಇಲಾಖೆಗೆ ನೋಟೀಸು ಕೂಡ ಕಳುಹಿಸಿದ್ದ ಎಂದರೆ ಇರಬಹುದು, ನಮಗೆ ಯಾವುದೂ ಕೊಟ್ಟಿಲ್ಲ.

7.ಈಗ 2 ವರ್ಷಗಳಿಂದ ತನಿಖೆ ಮಾಡುವವರಿಗೆ ಕ್ಯಾಮೆರಾ ಕೊಟ್ಟು ಅವರು ತನಿಖೆ ಪ್ರಾರಂಭವಾದಾಗಿನಿಂದ ಮುಕ್ತಾಯವಾಗುವವರೆಗೆ ರೆಕಾರ್ಡ್ ಮಾಡಬೇಕೆಂದು ಇದೆ ಎಂದರೆ ನಿಜ. ನಾವು ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತೇವೆಂದು ನಮ್ಮ ಮೇಲಿನ ಆಡಳಿತ ಮಂಡಳಿಗೆ ಗೊತ್ತಾಗಿ ನಮಗೆ ತನಿಖೆಗೆ ಕ್ಯಾಮೆರಾ ಕೊಟ್ಟದ್ದು ಎಂದರೆ ಸಾಕ್ಷಿಯು ಸತ್ಯಕ್ಕೆ ಹತ್ತಿರ ಇರಬೇಕೆಂದು ಮಾಡಿದ್ದು ಎನ್ನುತ್ತಾರೆ. ನಾವು ತನಿಖಾ ಕಾರ್ಯದ ಪ್ರಗತಿ ತೋರಿಸಬೇಕು ಮತ್ತು ಗುರಿ ತಲುಪಬೇಕೆನ್ನುವ ಕಾರಣಕ್ಕೋಸ್ಕರ 1ನೇ ಪಕ್ಷಗಾರರ ಮೇಲೆ ಸುಳ್ಳು ವರದಿ ನೀಡಿದ್ದು ಎಂದರೆ ಸರಿಯಲ್ಲ.

8.ಇವರ ಮೇಲೆ ಹಿಂದೆ ನಾವು ಯಾವತ್ತೂ ಅಪರಾಧ ಹೊರಿಸಿಲ್ಲ. ಈಗ ನಾವು ಮಾಡಿರುವ ಆರೋಪ ಅವರ ಹತ್ತು ವರ್ಷಗಳ ಸೇವೆಯಲ್ಲಿ ಮೊದಲನೆಯದು ಎಂದರೆ ಇರಬಹುದು.

9.ಆ ದಿವಸ ನಿರ್ವಾಹಕರ ಬಳಿ ಇದ್ದ ನಗದು ಚೆಕ್ ಮಾಡಿರುತ್ತೇವೆ, ಆ ಬಗ್ಗೆ ದಾಖಲೆ ಇಲ್ಲ. ಪ್ರತಿಸಲವೂ ಚೆಕ್ ಗೆ ಹೋದಾಗ ಚಾಲಕರ ಬಳಿ ಇರುವ ನಗದು ಚೆಕ್ ಮಾಡುತ್ತೇವಾ ಎಂದರೆ ಸಾಕ್ಷಿಯು ಕೊನೆ ಹಂತದಲ್ಲಿ ಮಾಡುತ್ತೇವೆ ಎನ್ನುತ್ತಾರೆ. ಆವತ್ತು ಅವರ ಡ್ಯೂಟಿ ಮುಗಿದಿರಲಿಲ್ಲ ಎಂದರೆ

ಸಾಕ್ಷಿಯು ರಾಮಾಥಪುರದಿಂದ ಮೂಡಿಗೆರೆಗೆ ಬರುವುದು ಅವರ ಕರ್ತವ್ಯದ ಕೊನೆಯ ಹಂತವಾಗಿತ್ತು ಎನ್ನುತ್ತಾರೆ. ನಾವು ಆಪಾದಿಸಿರುವಂತೆ ಅವರ ಬಳಿ 5020ರೂಪಾಯಿ ಹಣ ಇರಲಿಲ್ಲ, ಅದು ಪ್ರಯಾಣಿಕರ ಹಣವಾಗಿತ್ತು ಎಂದರೆ ಸರಿಯಲ್ಲ. ದುರುದ್ದೇಶದಿಂದ ಅವರ ಮೇಲೆ ಸುಳ್ಳು ಆಪಾದನೆ ಮಾಡಿದ್ದೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**